**ಕರ್ನಾಟಕ ಸರ್ಕಾರ**

ಸಂಖ್ಯೆ: ಡಿಟಿಇ 04 ಎಸ್‌ಸಿಹೆಚ್(1) 2017-18

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣಾ ಇಲಾಖೆ,
ಬೆಂಗಳೂರು-560 001.
ದಿನಾಂಕ: 09-10-2017.

**-:: ಸುತ್ತೋಲೆ ::-**

**ವಿಷಯ:** ಹಿಂದುಳಿದ ವರ್ಗಗಳಿಗೆ ಸೇರಿದ ಮೆಟ್ರಿಕ್ ನಂತರದ ಪ್ರವರ್ಗಾವಾರು ವಿದ್ಯಾರ್ಥಿಗಳ ಮಾಹಿತಿ ಒದಗಿಸುವ ಕುರಿತು.

**ಉಲ್ಲೇಖ:** ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಹಿಂವಕಇ/ಡಿಬಿಟಿ/ಸಿಆರ್/17/2017-18, ದಿನಾಂಕ: 27.09.2017

-**&**-

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಹಿಂದುಳಿದ ವರ್ಗಗಳಿಗೆ ಸೇರಿದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ, ಶುಲ್ಕ ವಿನಾಯಿತಿ ಮತ್ತು ವಿದ್ಯಾಸಿರಿ ಯೋಜನೆಗಳ ಸೌಲಭ್ಯ ನೀಡಲಾಗುತ್ತಿದ್ದು, 2016-17 ಮತ್ತು 2017-18ನೇ ಸಾಲಿನಲ್ಲಿ ನಿಗದಿತ ಸಮಯದೊಳಗೆ ಅರ್ಹರಾದವರಿಗೆ ತಲುಪುತ್ತಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ತಂತ್ರಾಂಶದಲ್ಲಿ ಅಳವಡಿಸಿಕೊಳ್ಳಲು ಮತ್ತು ತುಲನೆ ಮಾಡುವ ಉದ್ದೇಶದಿಂದ ದತ್ತಾಂಶ ವಿವರಗಳ ಮಾಹಿತಿಯನ್ನು(ಪ್ರವರ್ಗವಾರು) ಸಾಫ್ಟ್ ಪ್ರತಿಯಲ್ಲಿ ಸಿದ್ದಪಡಿಸಿ **ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ನಂ. 16-ಡಿ, 3ನೇ ಮಹಡಿ, ದೇವರಾಜ ಅರಸು ಭವನ, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, ವಸಂತ ನಗರ, ಬೆಂಗಳೂರು -560 052** ಇವರ ಕಛೇರಿಗೆ ನೇರವಾಗಿ ಕಳುಹಿಸುವ ಬಗ್ಗೆ ಖುದ್ದಾಗಿ ಪ್ರಾಂಶುಪಾಲರು ಗಮನಹರಿಸಿ ಶೀಘ್ರವಾಗಿ ಮಾಹಿತಿಯನ್ನು ಕಳುಹಿಸಿಕೊಡಲು ಈ ಮೂಲಕ ತಿಳಿಯಪಡಿಸಿದೆ.

ನಿರ್ದೇಶಕರು

**ಇವರಿಗೆ,**

ರಾಜ್ಯದ ಎಲ್ಲಾ ಇಂಜಿನಿಯರಿಂಗ್ ಕಾಲೇಜು ಮತ್ತು ಪಾಲಿಟೆಕ್ನಿಕ್‌ಗಳು ಪ್ರಾಂಶುಪಾಲರುಗಳಿಗೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಯೋಜನೆಯ ಫಲವನ್ನು ಸಂಪೂರ್ಣವಾಗಿ ಬಳಸಿಕೊಂಡಿರುವ ವಿದ್ಯಾರ್ಥಿಗಳ ಬಗ್ಗೆ ಅಂಕಿ-ಅಂಶದ ಮಾಹಿತಿಯನ್ನು ಕಳುಹಿಸಲು ಖುದ್ದಾಗಿ ಕ್ರಮ ಕೈಗೊಳ್ಳುವುದು.

**ಪ್ರತಿ :**

1. ನಿರ್ದೇಶಕರ ಆಪ್ತಶಾಖೆಗೆ ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು - ಇವರ ಅವಗಾಹನೆಗಾಗಿ.
2. ಇ-ಆಡಳಿತ ಘಟಕಕ್ಕೆ - ವೆಬ್‌ಸೈಟ್‌ನಲ್ಲಿ ಪ್ರಚುರ ಪಡಿಸಲು.
3. ಹೆಚ್ಚುವರಿ ಪ್ರತಿಗಳು.